**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯಃ**
**ಬೇಲೂರು**

**ಸಿ. ಸಿ. ಸಂಖ್ಯೆ ಃ 29 ಃ 2019**

ಪಿರ್ಯಾದಿ ಃ ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸಿ
ಬೇಲೂರು ಪೊಲೀಸರು

**- ವಿರುದ್ಧ -**

ಆರೋಪಿ ಃ ಅನಂತಾಚಾರಿ ಕಮ್ಮಾರ್ ಬಿನ್ ಮೌನಾಚಾರ್, 42 ವರ್ಷ,
ಕೆಎಸ್ಆರ್‌ಟಿಸಿ ಬಸ್‌ನ ಚಾಲಕ ಬೇಲೂರು ಡಿಪೋ
ರಟ್ಟಿಹಳ್ಳಿ ಗ್ರಾಮ, ಹಿರೆಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ.

**ಃಃ ಆರೋಪಣೆಯ ಸಾರಾಂಶ ಃಃ**

ದಿಃ 05.11.2018 ರಂದು ರಾತ್ರಿ ಸುಮಾರು 10.20 ಗಂಟೆ ಸಮಯದಲ್ಲಿ ಆರೋಪಿಯಾದ ನೀನು ಬೇಲೂರು ತಾಲ್ಲೂಕು ಚಿಕ್ಕಬ್ಯಾಡಗೆರೆ ಗ್ರಾಮದ ಹತ್ತಿರ ಇರುವ ಯಗಚಿ ಡ್ಯಾಂ ಗೇಟಿನ ಮುಂಭಾಗದಲ್ಲಿರುವ ಬೇಲೂರು-ಚಿಕ್ಕಮಗಳೂರು ಡಾರು ರಸ್ತೆಯಲ್ಲಿ ತಾನು ಚಿಕ್ಕಮಗಳೂರಿನಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದ ಕೆಎ 18 ಎಫ್ 944 ರ ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ರಸ್ತೆಯ ಎಡಬದಿಯಲ್ಲಿ ಬಸ್ಸನು ಚಾಲನೆ ಮಾಡದೇ ಬಲಬದಿಗೆ ಬಸ್ಸನ್ನು ಚಾಲನೆ ಮಾಡಿ ಬೇಲೂರು ಕಡೆಯಿಂದ ರಸ್ತೆಯ ಎಡಬದಿಯಲ್ಲಿ ಬರುತ್ತಿದ್ದ ಕೆಎ 18 ಟಿಬಿ 1650 ರ ಟ್ರಾಕ್ಟರ್ ನ ಇಂಜಿನ್‌ನ ಮುಂಭಾಗದಲ್ಲಿರುವ ಸಣ್ಣ ಚಕ್ರಕ್ಕೆ ತಾಗಿಸಿ ನಂತರ ಇಂಜಿನ್ ನ ಹಿಂಬದಿಯ ದೊಡ್ಡ ಚಕ್ರಕ್ಕೆ ಗುದ್ದಿಸಿ, ಟ್ರಾಕ್ಟರ್ ಮತ್ತು ಕೆಎ 18 ಟಿ 7447 ರ ಟ್ರೇಲರ್ ಜಖಂಗೊಳ್ಳುವಂತೆ ಮಾಡಿ, ತನಗೂ ಸಹ ತೀವ್ರ ಸ್ವರೂಪದ ಗಾಯಗಳನ್ನುಂಟು ಮಾಡಿಕೊಂಡಿರುವ ಕಾರಣ ಭಾರತೀಯ ದಂಡ ಸಂಹಿತೆ ಕಲಂ. 279, 338 ರಡಿಯಲ್ಲಿ ಅಪರಾಧವನ್ನು ಎಸಗಿರುತ್ತೀರಾ ಅಂತ ಪಿರ್ಯಾದಿ ಪೋಲೀಸರು ಆರೋಪಿಸಿದ್ದಾರೆ.

*ಪ್ರಶ್ನೆ ಃ ಈಗ ನಿಮಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?*

*ಉತ್ತರ ಃ*

*ಪ್ರಶ್ನೆ ಃ ನೀವು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?*

*ಉತ್ತರಃ*

(ಆಪಾದಿತರಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.)

ಸ್ಥಳ ಃ ಬೇಲೂರು
ದಿನಾಂಕ ಃ 02-12-2019

**(ಶಶಿಧರ ಎಂ. ಗೌಡ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು.